ಮೇಲ್ಪ್ರ ರಸ್ತೆ ಇರುತ್ತದೆ. ಉಳಿದ 7 ಕಿಮೀ. ರಸ್ತೆಯ ಅಭಿವೃದ್ಧಿ ಹಾಗೂ ಡಾಂಬರೀಕರಣಕ್ಕಾಗಿ 2006–07 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ಯೋಜನೆ ಅಡಿಯಲ್ಲಿ ಟೆಂಡರ್ ಮುಖಾಂತರ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.

ಹಣವಾಳದಿಂದ – ಚಳ್ಳೂರು ರಸ್ತೆಯು ಒಟ್ಟು 12.90 ಕಿ.ಮೀ ಉದ್ದವಿದ್ದು, ಅದರಲ್ಲಿ ಹಣವಾಳದಿಂದ ಹಣವಾಳ ಕ್ಯಾಂಪ್‌ವರೆಗಿನ 2006–07 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ಯೋಜನೆಯಡಿಯಲ್ಲಿ ಸುಧಾರಣೆ ಹಾಗೂ ಮರು ಡಾಂಬರೀಕರಣ (4.00 ಕಿಮಿ) ಕಾಮಗಾರಿಯನ್ನು ಟೆಂಡರ್ ಮುಖಾಂತರ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಹಣವಾಳದಿಂದ ಚಳ್ಳೂರು ರಸ್ತೆಯ ಉಳಿದ ಭಾಗವನ್ನು ಹಾಗೂ ಸಿದ್ದಾಪೂರದಿಂದ ಬೆನ್ನೂರವರೆಗಿನ ಉಳಿದ ಭಾಗವನ್ನು 2007–08 ನೇ ಸಾಲಿನ ಆಯವ್ಯಯದಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನಾಧರಿಸಿ, ಮರು ಡಾಂಬರೀಕರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

1552 (1924) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಟ್ಟು ಇರುವ ಬಸ್ಸುಗಳೆಷ್ಟು;

ಆ) ಇದರಲ್ಲಿ ಹಳೆಯ ಬಸ್ಸುಗಳೇಷ್ಟು; (ನಿಗದಿತ ದೂರ ಕ್ರಮಿಸಿದ ವಾಹನಗಳು)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಬಸ್ಸುಗಳು ಇವೆ;

ಈ) ಇದರಲ್ಲಿ ಹಳೆಯ ಬಸ್ಸುಗಳೆಷ್ಟು;

ಉ) ಹಳೆಯ ಬಸ್ಸುಗಳನ್ನು ಬದಲಾಯಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಒಟ್ಟು : **16654.**

ಆ) : **1968**

ಇ) ಒಟ್ಟು : **571 ಬಸ್ಸುಗಳು**

ಈ) : **106.**

ಉ) ಹಂತಹಂತವಾಗಿ ಹಳೆಯ ಬಸ್ಸುಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ.

1553 (1944) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ; ಹಾಗೂ ಅವುಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗಿದೆ;

ಆ) ಸಿರ್ಸಿ ಹೊಸ ನಿಲ್ದಾಣ ಇನ್ನೂ ಯಾವುದೇ ಅಭಿವೃದ್ಧಿ ಆಗದೇ ಇರಲು ಕಾರಣಗಳೇನು;

ಇ) ನಿಲ್ದಾಣಕ್ಕೆ ಡಾಂಬರೀಕರಣ ಅಥವಾ ಸಿಮೆಂಟ್ ರಸ್ತೆಗಳನ್ನು ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಯಾವಾಗ ಕಲ್ಪಿಸಲಾಗುವುದು;

ಈ) ಸರ್ಕಾರ ಇದರ ಬಗ್ಗೆ ಗಂಭೀರ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಅನುಬಂಧ-ಅ ನಲ್ಲಿ ನೀಡಲಾಗಿದೆ.

ಆ ಮತ್ತು ಇ) ಬಸ್ ನಿಲ್ದಾಣದ ಆವರಣಕ್ಕೆ ಡಾಂಬರೀಕರಣ ಅಳವಡಿಸಲು 2007-08 ನೇ ಸಾಲಿನಲ್ಲಿ 30 ಲಕ್ಷ ರೂ.ಗಳ ಪ್ರಾವದಾನ ಮಾಡಲಾಗಿದೆ.

ಈ) ಹೌದು.